ಆ) ಬೆಂಗಳೂರು ನಗರದಲ್ಲಿ 50 ಖಾಲಿ ಮೂಲೆ ನಿವೇಶನಗಳನ್ನು ಹರಾಜು ಮಾಡಲಾಗುವುದು.

ಇ) ಕರ್ನಾಟಕ ಗೃಹ ಮಂಡಳಿ ಅಧಿನಿಯಮ 1962 ಹಾಗೂ ನಿಯಮಗಳ ಉಪಬಂಧಗಳಡಿಯಲ್ಲಿ, ಗೃಹ ಮಂಡಳಿಯ ವಶದಲ್ಲಿರುವ ನಿವೇಶನಗಳನ್ನು ಹರಾಜು ಮೂಲಕ ವಿಲೇ ಮಾಡಲಾಗುತ್ತಿದೆ.

ಬೀದರ್ ಜಿಲ್ಲಾ ಬಸವ ಕಲ್ಯಾಣ ಪುರಸಭೆಗೆ ಹಣ ಬಿಡುಗಡೆ ಮಾಡದೇ ಇರುವ ಬಗ್ಗೆ.

548 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) *ಬಸವಕಲ್ಯಾಣ ಪುರಸಭೆಯಲ್ಲಿ ಹಣದ ಕೊರತೆಯಿಂದ ಯಾವುದೇ ಅಭಿವೃದ್ಧಿ ಕೆಲಸಗಳು ನಡೆಯದೇ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *1992-93ರಲ್ಲಿ ಈ ಪುರಸಭೆಗೆ ಸರ್ಕಾರ ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು?*

3) *1993-94ರಲ್ಲಿ ಈ ಪುರಸಭೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು.*

4) *ಬಸವಕಲ್ಯಾಣ ಒಂದು ಐತಿಹಾಸಿಕ ಸ್ಥಳವಾಗಿದ್ದು ಈ ಪಟ್ಟಣದಲ್ಲಿ ರಸ್ತೆ, ಒಳಚರಂಡಿ ಮುಂತಾದ ಸೌಲಭ್ಯಗಳನ್ನು ಒದಗಿಸದೇ ಇರುವುದರಿಂದ ಪ್ರವಾಸಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

5) *ಸರ್ಕಾರ ಈ ಪುರಸಭೆಗೆ ವಿಶೇಷ ಅನುದಾನವನ್ನು ಮಂಜೂರು ಮಾಡುತ್ತದೆಯೇ?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

1) ಬಂದಿರುವುದಿಲ್ಲ.

2) 92-93ರ ಸಾಲಿಗೆ ಸರ್ಕಾರವು ಒಟ್ಟು ರೂ. 12,87,348.00 ಗಳನ್ನು ಬಿಡುಗಡೆ ಮಾಡಿರುತ್ತೆ.

3) ಇತರ ಸ್ಥಾನಿಕ ಸಂಸ್ಥೆಗಳಿಗೆ ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡವಾಗ ಕ್ರಮವನ್ನು ತೆಗೆದುಕೊಳ್ಳಲಾಗುವುದು.

4) ಬಂದಿರುವುದಿಲ್ಲ.

5) ಅವಶ್ಯಕತೆಗನುಸಾರವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾಗುವ ಹೊಸ ಸಕ್ಕರೆ ಕಾರ್ಖಾನೆಗಳು.

550 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳು ಸ್ಥಾಪಿಸಲು ಕೇಂದ್ರ ಸರ್ಕಾರದವರು ಪರವಾನಿಗೆ ನೀಡಿರುವರೇ;

(ಆ) ಬಿರ್ಲಾದವರಿಗೆ ಬೀದರ್ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆಯೇ;

(ಇ) ಈ ಹೊಸ ಕಾರ್ಖಾನೆಗಳು ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಭಾಗಗಳಲ್ಲಿ ಪ್ರಾರಂಭಿಸಲಾಗುವುದು;

(ಈ) ಬಸವಕಲ್ಯಾಣದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆಯೇ;

(ಡಾ: ಹೆಗ್ಗಪ್ಪ ಡಿ. ಲಮಾಣಿ (ಸಕ್ಕರೆ ಸಚಿವರು):

ಅ) ಇತ್ತೀಚೆಗೆ ದಿ: 24-6-93ರಲ್ಲಿ ಕೇಂದ್ರ ಪರಿಶೀಲನಾ ಸಮಿತಿಯು ಸಭೆ ಜರುಗಿಸಿರುತ್ತದೆ. ರಾಜ್ಯದ ಇತರೆ ಜಿಲ್ಲೆಗಳನ್ನೊಳಗೊಂಡಂತೆ ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗಾಗಿ ಬಂದಿದ್ದ ಅರ್ಜಿಗಳ ಪರಿಶೀಲನೆ ನಡೆದಿದ್ದು, ಈ ದಿಸೆಯಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಅನುಮತಿ ಪತ್ರ ನೀಡಲು ಪರಿಗಣಿಸಿರುವ ಪ್ರಸ್ತಾವನೆಗಳ ವಿವರಗಳನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸಲಾಗಿದೆ.

(ಆ) ಕೇಂದ್ರ ಸರ್ಕಾರ ಇನ್ನೂ ಅನುಮತಿ ಪತ್ರ ನೀಡಿರುವುದಿಲ್ಲ.

(ಇ) ಬೀದರ್ ಜಿಲ್ಲೆಯಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರದಿಂದ ಶಿಫಾರಸ್ಸಾಗಿ ಅನುಮತಿ ಪತ್ರಕ್ಕಾಗಿ ಈ ಕೆಳಕಂಡ ಪ್ರಸ್ತಾವನೆಗಳು ಕೇಂದ್ರ ಸರ್ಕಾರದ ಮುಂದೆ ಇರುತ್ತದೆ.

(1) ಮೆ: ಅನುಭವ ಮಂಟಪ ಷುಗರ್ಸ್, ಬಸವಕಲ್ಯಾಣ

(2) ದಿ: ಮಹಾತ್ಮಾಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಹಂಚಿ: ಹಚಿಕಮತ್, ಬಾಲ್ಕಿ ತಾಲ್ಲೂಕು.

(3) ಝುವಾರಿ ಆಗ್ರೋ ಕೆಮಿಕಲ್ಸ್, ದೋವಾ (ಹಳ್ಳಿಖೇಡ್-ಕೆ), ಹುಮ್ನಾಬಾದ್ ತಾಲ್ಲೂಕು.

(ಈ) ಇನ್ನೂ ಇಲ್ಲ.

ರಾಜ್ಯದಲ್ಲಿರುವ ಜವಳಿ ಗಿರಣಿಗಳ ಸಂಖ್ಯೆ.

597- ಶ್ರೀ ಬಿ. ರಾಜುಗೌಡ (ಹನೂರು) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಜವಳಿ ಗಿರಣಿಗಳ ಸಂಖ್ಯೆ ಎಷ್ಟು ಇದರಲ್ಲಿ ರೋಗಗ್ರಸ್ಥ ಜವಳಿ ಗಿರಣಿಗಳ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ಬೆಳೆಯುವ ಎಲ್ಲಾ ಹತ್ತಿಯನ್ನೂ ನೂಲಾಗಿ ಪರಿವರ್ತಿಸಲು ಈ ಘಟಕಗಳಿಂದ ಸಾಧ್ಯವಾಗುತ್ತದೆಯೇ ಹಾಗಿಲ್ಲವಿದ್ದಲ್ಲಿ ಉದ್ಯಮವನ್ನು ಶಕ್ತಿಶಾಲಿಯಾಗಿ ಬೆಳೆಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿರುವ ಜವಳಿ ಗಿರಣಿಗಳ ಸಂಖ್ಯೆ 8.

ರೋಗಗ್ರಸ್ತವಾಗಿರುವ ಜವಳಿ ಗಿರಣಿಗಳ ಸಂಖ್ಯೆ 8.

ಆ) ರಾಜ್ಯದಲ್ಲಿ ಸುಮಾರು 9 ಲಕ್ಷ ಬೇಲಹತ್ತಿ ಉತ್ಪಾದನೆಯಾಗುತ್ತಿದ್ದು ಈ ಎಲ್ಲ ಹತ್ತಿಯನ್ನು ನೂಲಾಗಿ ಪರಿವರ್ತಿಸಲು ರಾಜ್ಯದಲ್ಲಿ ಸಧ್ಯ ಇರುವ ನೂಲಿನ ಗಿರಣಿಗಳಿಂದ ಸಾಧ್ಯವಾಗುವುದಿಲ್ಲ.

ರಾಜ್ಯದಲ್ಲಿ ನೂಲಿನ ಗಿರಣಿಗಳ ಉದ್ಯಮವನ್ನು ಶಕ್ತಿಶಾಲಿಯಾಗಿ ಬೆಳೆಸಲು ಸರ್ಕಾರ ತನ್ನ ಹೊಸ ಜವಳಿ ನೀತಿಯನ್ವಯ ಕಾರ್ಯಕ್ರಮ ರೂಪಿಸಲಿದೆ. 21ನೇ ಶತಮಾನದ ಆರಂಭಕ್ಕೆ ಮೊದಲು ಕನಿಷ್ಟ 6 ಲಕ್ಷ ಕದಿರು ಸಾಮರ್ಥ್ಯದ ನೂಲಿನ ಗಿರಣಿಗಳ ಸ್ಥಾಪನೆಗೆ ಆದ್ಯತೆ ನೀಡಲಾಗುವುದು. ಸಹಕಾರಿ ಕ್ಷೇತ್ರ, ಖಾಸಗಿ ಕ್ಷೇತ್ರ ಹಾಗೂ ಜಂಟಿ ಕ್ಷೇತ್ರದಲ್ಲಿ ಈ ಗಿರಣಿಗಳ ಸ್ಥಾಪನೆಗೆ ಉದ್ದೇಶಿಸಲಾಗಿದ್ದು, ಸಣ್ಣ ನೂಲಿನ